

## ಶಾಪಿಂಗ್ ಹುಚ್ಚಿಗೆ ಕಡಿವಾಣ ಅಗತ್ಯ

ಕಾವ್ಯಶ್ರೀ ಎನ್. ಅವರ ಮುಖಪುಟ ಲೇಖನ 'ಅಂಗೈಯಲ್ಲಿ ಅಂಗಡಿ' (ಡಿ. 17) ಚೆನ್ನಾಗಿತ್ತು. ನನಗೂ ಆನ್‌ಲೈನ್ ಶಾಪಿಂಗ್ ಹುಚ್ಚು ಹಿಡಿದಿತ್ತು. ಆದರೆ ಹತ್ತರಲ್ಲಿ ಒಂಬತ್ತು ಚೀನಾ ವಸ್ತುಗಳೇ ಬರತೊಡಗಿದ ಮೇಲೆ ನನ್ನ ಈ ಅಭ್ಯಾಸಕ್ಕೆ ಮಂಗಳ ಹಾಡಿದೆ. ಈಗ ಪೇಟೆ ಅಂಗಡಿಗೆ ಹೋಗಿ ಮೊದಲು ಕೇಳುತ್ತೇನೆ 'ಇದು ಭಾರತದ್ದೋ ಚೀನಾದ್ದೋ?'

—ಬಸವರಾಜ ಹರಿಹರ, ಧಾರವಾಡ

ಲೇಖನ ಮನೆಯಲ್ಲಿಯೇ ಕುಳಿತು ಶಾಪಿಂಗ್ ಮಾಡುವ ವಿಷಯದ ಕುರಿತಾದ ಸಾಧಕ ಬಾಧಕಗಳ ಬಗ್ಗೆ ವಿವರಗಳನ್ನು ನೀಡಿದೆ. ಹಿಂದೆ ವರ್ಷಕ್ಕೆ ಒಂದೋ ಎರಡೋ ಬಾರಿ ಮಾತ್ರ ಕುಟುಂಬದವರೊಡನೆ ಶಾಪಿಂಗ್ ಮಾಡಿ, ನಂತರ ಹೋಟೆಲ್‌ಗೆ ಹೋಗಿ ಮಸಾಲೆ ದೋಸೆ ತಿಂದು ಕಾಫಿ ಕುಡಿದು ಮನೆಗೆ ಬರುತ್ತಿದ್ದ ಸಂಭ್ರಮ ಆನ್‌ಲೈನ್ ಶಾಪಿಂಗ್‌ನಲ್ಲಿ ಎಲ್ಲಿಂದ ಬರಬೇಕು? ಆನ್‌ಲೈನ್ ಶಾಪಿಂಗ್ ಮಾಡುವಾಗ ವಸ್ತುವಿನ ಬಣ್ಣ, ಗುಣಮಟ್ಟ ತಿಳಿಯುವುದು ಕಷ್ಟ. ಅಲ್ಲದೆ ಅನವಶ್ಯಕ ವಸ್ತುಗಳ ಶಾಪಿಂಗ್ ಆಗಿ, ಶಾಪಿಂಗ್ ಮೇನಿಯಾ (ಕೊಳ್ಳುಬಾಕ ಸಂಸ್ಕೃತಿ)ಗೆ ಒಳಗಾಗುವ ಸಾಧ್ಯತೆಗಳೂ ಇಲ್ಲದೆ ಇಲ್ಲ.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

'ಸುಧಾ' ಎಷ್ಟು ತ್ವರಿತವಾಗಿದೆ, ವರ್ತಮಾನಕ್ಕೆ ಎಷ್ಟು ಬೇಗನೆ ಸ್ಪಂದಿಸುತ್ತದೆ ಎನ್ನುವುದಕ್ಕೆ ಈ ಲೇಖನ ಸಾಕ್ಷಿ. ಅತ್ಯಂತ ಸಮಂಜಸವಾಗಿ, ಸಕಾಲಕ್ಕೆ ಲೇಖನ ಮೂಡಿಬಂದಿದೆ.

—ಉಷಾ ಭಟ್

'ಅಂಗೈಯಲ್ಲೇ ಅಂಗಡಿ' ಲೇಖನ ಸಮಾಜದ ಶಾಪಿಂಗ್ ಹುಚ್ಚಿಗೆ ಹಿಡಿದಿರುವ ಕನ್ನಡಿ. ನಮ್ಮ ದುಡ್ಡು, ನಮ್ಮ ಖರೀದಿ ಎಂದು ಹೇಳಬಹುದಾದರೂ, ಅನಗತ್ಯವಾದ ಖರೀದಿಯಿಂದ ವೈಯಕ್ತಿಕವಾಗಿಯೂ ಸುಖವಿಲ್ಲ, ಸಮಾಜಕ್ಕೂ ಹಿತವಾದುದಲ್ಲ. ಕಂಡದ್ದನ್ನೆಲ್ಲ ಕೊಳ್ಳುವವರು, ದೀನದಲಿತರ ನೋವಿನ ಮುಖಗಳನ್ನೊಮ್ಮೆ ನೆನಪಿಸಿಕೊಳ್ಳಬೇಕು. ಮನೆಯಲ್ಲಿ ಗುಡ್ಡೆ ಹಾಕಿಕೊಂಡಿರುವ ಅನಗತ್ಯ ವಸ್ತುಗಳನ್ನು ಅಗತ್ಯವಿದ್ದವರಿಗೆ ನೀಡಿದಾಗ, ಪಡೆದವರ ಕಣ್ಣುಗಳಲ್ಲಿ ಕಾಣಿಸುವ ಹೊಳಪಿಗೆ ಬೆಲೆ ಕಟ್ಟುವುದು ಸಾಧ್ಯವೆ?

—ಗಾನವಿ ಎಂ.ಎಚ್., ಬೆಂಗಳೂರು

## ಅಳಿಗೊಂದು ಮಾತಿನ ಕಲ್ಲು

'ನಿಮ್ಮೊಡನೆ' ಪುಟದಲ್ಲಿ ರಘುನಾಥ ಚ. ಹ. ಬರೆದಿರುವ 'ಮೌಲ್ಯವ್ಯವಸ್ಥೆಗೆ ಅಳಿಗೊಂದು ಮಾತಿನಕಲ್ಲು' (ಡಿ. 17) ಲೇಖನವಿಚಾರ ಪೂರ್ಣವಾಗಿದೆ. ರೈತರಂತೆ ನಾವೆಲ್ಲರೂ ಪ್ರಕೃತಿ ಮಾತೆಯ ಮಕ್ಕಳೇ.

—ಸುಶೀಲಾ ರಾವ್, ಉಡುಪಿ

ಕೇಂದ್ರ ಸರ್ಕಾರ ನೂತನ ಕೃಷಿ ಕಾಯಿದೆಗಳನ್ನು ತರುವುದಕ್ಕೆ ಮುನ್ನ ಎಲ್ಲ ಭಾಗೀದಾರರಲ್ಲಿ ಚರ್ಚೆ ಮಾಡಿ ನಿರ್ಧಾರಕ್ಕೆ ಬಾರದೆ ಏಕಪಕ್ಷೀಯವಾಗಿ ತೀರ್ಮಾನಿಸುವುದು ಖಂಡನೀಯ ಮತ್ತು ಪ್ರಜಾಪ್ರಭುತ್ವ ಸಿದ್ಧಾಂತದ ವಿರುದ್ಧವಾಗಿದೆ. ಪ್ರಸ್ತುತ ರೈತ ಚಳವಳಿಯಲ್ಲಿ ರಾಜಕೀಯದ ನೆರಳುಗಳನ್ನೂ ಕಾಣಬಹುದು. ಕೆನಡಾ ಮತ್ತು ಇಂಗ್ಲೆಂಡ್ ದೇಶಗಳ ಭಾರತ ರಾಜಕಾರಣಿಗಳು ರೈತರ ಪರವಾಗಿ ಹೇಳಿಕೆಗಳನ್ನು ನೀಡಿರುವುದು ಭಾರತದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಆದಂತೆ ಅಲ್ಲದೆ ಇನ್ನೇನು? ಮತ್ತು ಯಾವುದೇ ರಾಜಕೀಯ ಪಕ್ಷವೂ, ಪ್ರಮುಖವಾಗಿ ಎಡ ಪಕ್ಷಗಳ ದಿವ್ಯಮೌನವು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಇನ್ನೊಂದು ಮುಖ್ಯ ಅಂಶವೆಂದರೆ, ಕಾಂಗ್ರೆಸ್ ಪಕ್ಷ ತನ್ನ 2019ರ ಚುನಾವಣೆಯ ಪ್ರಣಾಳಿಕೆಯಲ್ಲಿ ಎಪಿಎಂಸಿ ಕಾಯಿದೆಯನ್ನು ತೆಗೆದು ಹಾಕುವುದಾಗಿ ಹೇಳಿಕೊಂಡಿತ್ತು.

—ಎಚ್.ಆರ್. ವೆಂಕಟ ಸುಬ್ಬರಾವ್, ಕೋಲಾರ

## ಮಣ್ಣಿನ ದಿನ

ಮಣ್ಣಿನ ಮಹತ್ವವನ್ನು ಸುಮಂಗಲ ಮುಮ್ಮಿಗಟ್ಟಿ (ಡಿ. 10) ಅವರು ಚೆನ್ನಾಗಿ ವಿವರಿಸಿದ್ದಾರೆ. ಮಣ್ಣಿನಿಂದ ಎಲ್ಲವೂ.

—ನರಸಿಂಹ ರಾವ್, ಬೆಂಗಳೂರು

## ಖುಷಿ ಕೊಟ್ಟ ಹಾಸ್ಯಬರಹ

ಜಿ.ವಿ. ಅರುಣ ಅವರ 'ಇಲ್ಲಿಂದಲೇ ಕೈಮುಗಿಯುವೆ, ಅಲ್ಲಿಂದಲೇ ಹರಸು' (ಡಿ. 17) ಹಾಸ್ಯಬರಹ ಸಕಾಲಿಕ. ಈ ಕೊರೊನಾ ಕಾಲದಲ್ಲಿ ನೆಂಟರು–ಇಷ್ಟರು, ಬಂಧು–ಬಳಗ ಎಲ್ಲಾ ದೂರ ದೂರ. ಯಾರೂ ಧೈರ್ಯ ಮಾಡಿ ಸಮಾರಂಭಗಳಲ್ಲಿ ಭಾಗವಹಿಸುವುದಿಲ್ಲ. ಮುಂದಿನ ವರ್ಷ ಕಾದು ನೋಡಬೇಕು.

—ಲಕ್ಷ್ಮಣರಾವ್ ಎಂ. ಎಲ್.

'ಇಲ್ಲಿಂದಲೇ ಕೈಮುಗಿಯುವೆ, ಅಲ್ಲಿಂದಲೇ ಹರಸು' ಲೇಖನ ಸೊಗಸಾಗಿದೆ. ಸಾಕಷ್ಟು ನಕ್ಕೆ.

—ಪಿ.ಎಸ್. ನಾಯಕ್



## ಇಂಗ್ಲೆಂಡಿನ ನಾಲೆಗಳು

ಅನುರಾಧ ಜಗಲೂರು ಅವರ 'ಇಂಗ್ಲೆಂಡಿನ ಮನೋಹರ ನಾಲೆಗಳು' (ಡಿ. 17) ಲೇಖನ ಓದಿ ತುಂಬಾ ಖುಷಿಯಾಯ್ತು. ಮನಮೋಹಕ ಛಾಯಾಚಿತ್ರಗಳೂ, ಹಿನ್ನೆಲೆಯೊಂದಿಗಿನ ವಿವರಣಾ ಬರಹವೂ ಎಲ್ಲವೂ ನಮ್ಮನ್ನೂ ಒಮ್ಮೆ ಅಲ್ಲೆಲ್ಲ ಓಡಾಡಿಸಿಕೊಂಡು ಬಂದಷ್ಟು ಚೆನ್ನಾಗಿತ್ತು. ಇದನ್ನು ನೋಡಲು ಸರಿಯಾದ ಸಮಯ, ಯೋಜನೆ, ವ್ಯವಸ್ಥೆಗಳ ಬಗ್ಗೆಯೂ, ವಿವರಣೆ ಕೊಟ್ಟರೆ ನಾವೂ ಒಮ್ಮೆ ನೋಡಲು ಪ್ರಯತ್ನಿಸುವಾಸೆ.

—ಶ್ರೀಕಾಂತ್ ಎನ್.

'ಇಂಗ್ಲೆಂಡಿನ ಮನೋಹರ ನಾಲೆಗಳು' ಓದಿ ಬಹಳ ಸಂತೋಷವಾಯಿತು. ಲೇಖಕಿ ಚೆನ್ನಾಗಿ ಅಧ್ಯಯನ ಮಾಡಿ ಬರೆದಿದ್ದಾರೆ. ಅನುರಾಧ ಜಗಲೂರು ಅವರಿಗೆ ಅಭಿನಂದನೆಗಳು.

—ಮಾದಾಪುರ ವೆಂಕಟೇಶಮೂರ್ತಿ